19. ವಿಷಯ: ಯಾದಗಿರಿ ಜಿಲ್ಲೆಯಲ್ಲಿ ಅನಾವೃಷ್ಟಿಯಿಂದಾಗಿ ರೈತರು ಗುಳೆ ಹೋಗುತ್ತಿರುವ ಬಗ್ಗೆ.

ಡಾ॥ ಎ.ಬಿ. ಮಾಲಕರೆಡ್ಡಿ (ಯಾದಗಿರಿ): ಮಾನ್ಯ ಅಧ್ಯಕ್ಷರೆ, ಯಾದಗಿರಿ ಜಿಲ್ಲೆಯಲ್ಲಿ ಅನಾವೃಷ್ಟಿಯಿಂದಾಗಿ ರೈತರು ಗುಳೆ ಹೋಗುತ್ತಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ (ಮಾನ್ಯ ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, 2014–15ನೇ ಸಾಲಿನಲ್ಲಿ ಯಾದಗಿರಿ ಜಿಲ್ಲೆಯ ಸುರಪುರ, ಯಾದಗಿರಿ ಮತ್ತು ಶಹಾಪುರ ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಲಾಗಿದ್ದು, ಬರ ಪರಿಹಾರದಡಿ ತುರ್ತು ಕುಡಿಯುವ ನೀರಿನ ಪೂರೈಕೆ, ಜಾನುವಾರುಗಳಿಗೆ ಮೇವು ಪೂರೈಕೆ, ಬರದಿಂದ ಬೆಳೆ ಹಾನಿಯಾದ ರೈತರಿಗೆ ಇನ್‌ಪುಟ್ ಸಬ್ಸಿಡಿ ನೀಡುವುದು ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ಜನರಿಗೆ ಉದ್ಯೋಗ ನೀಡುವುದು ಇತ್ಯಾದಿ ಕಾರ್ಯಕ್ರಮಗಳನ್ನು ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಕೃಷಿ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖಾ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ ಹಾಗೂ ಈ ಜಿಲ್ಲೆಯಲ್ಲಿ ಯಾವುದೇ ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖಾ ವತಿಯಿಂದ ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ಜನರಿಗೆ ಉದ್ಯೋಗ ನೀಡಲಾಗುತ್ತಿದೆ. 2015–16ನೆ ಸಾಲಿನಲ್ಲಿ (ದಿನಾಂಕ:7–7–2015ರಂತೆ) 117 ಗ್ರಾಮ ಪಂಚಾಯತಿಯಲ್ಲಿ, 1.94 ಲಕ್ಷ ಜನರಿಗೆ ಉದ್ಯೋಗ ಚೀಟಿ ನೀಡಲಾಗಿದ್ದು, 362 ಕುಟುಂಬಗಳಿಗೆ ಉದ್ಯೋಗ ನೀಡಲಾಗಿದೆ. ಇದರಿಂದ 5698 ಮಾನವ ದಿನಗಳನ್ನು ಸೃಷ್ಟಿಸಲಾಗಿದೆ. ಜಿಲ್ಲೆಯಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಗಳ ಸಂಖ್ಯೆ 22,045ರಲ್ಲಿ 21,749

ಕಾಮಗಾರಿಗಳು ಪ್ರಗತಿಯಲ್ಲಿವೆ. ಇಲ್ಲಿಯವರೆಗೆ ಇದಕ್ಕಾಗಿ ರೂ.2.66 ಕೋಟಿ ಅನುದಾನ ಖರ್ಚು ಮಾಡಲಾಗಿದೆ.

ಉತ್ತರ ಕರ್ನಾಟಕದ ಭಾಗಗಳಲ್ಲಿ ಬೇಸಿಗೆ ಋತುವಿನಲ್ಲಿ ಉದ್ಯೋಗ ಅರಿಸಿ ಜನರು ಗುಳೇ ಹೋಗುವುದು ಸಾಮಾನ್ಯ ಸಂಗತಿಯಾಗಿರುತ್ತದೆ. ಮುಂಗಾರು ಆರಂಭವಾದೊಡನೆ ಈ ಕುಟುಂಬಗಳು ಮತ್ತೆ ವಾಪಸ್ಸು ತಮ್ಮ ತಮ್ಮ ಸ್ವಂತ ಊರುಗಳಿಗೆ ಹಿಂತಿರುಗುತ್ತಾರೆ ಹಾಗೂ ಕೃಷಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಸದ್ಯಕ್ಕೆ ಮುಂಗಾರು ಮಳೆ ಪ್ರಾರಂಭವಾಗಿರುವುದರಿಂದ ಜಿಲ್ಲೆಯಲ್ಲಿ ರೈತರು ಬಿತ್ತನೆ ಕಾರ್ಯದಲ್ಲಿ ತೊಡಗಿರುತ್ತಾರೆ. ಮಳೆಯ ಪ್ರಮಾಣ ಕಡಿಮೆಯಿರುವುದರಿಂದ ಬಿತ್ತನೆ ಕಾರ್ಯವನ್ನು ಜುಲೈ ಅಂತ್ಯದವರೆಗೆ ಮಾಡುತ್ತಾರೆ. ಆದುದರಿಂದ, ಜಿಲ್ಲೆಯಲ್ಲಿ ಬರ–ಪರಿಸ್ಥಿತಿಯಿಂದ ಉದ್ಯೋಗ ದೊರಕದೇ ಗುಂಪಾಗಿ ಗುಳೇ ಹೋಗುತ್ತಿರುವ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು): ಮಾನ್ಯ ಸದಸ್ಯರು ಗಮನ ಸೆಳೆಯುವ ರೂಪದಲ್ಲಿ ವಿಷಯ ಪ್ರಸ್ತಾಪ ಮಾಡಿದರು. ಈಗಾಗಲೇ 2014–15ನೇ ಸಾಲಿನಲ್ಲಿ ನಾವು ಯಾದಗಿರಿ ಜಿಲ್ಲೆ ಸುರಪುರ, ಯಾದಗಿರಿ ಮತ್ತು ಶಹಪುರ ಈ ಮೂರನ್ನು ಕೂಡ ಬರಪೀಡಿತ ಪ್ರದೇಶ ಎಂದು ಘೋಷಣೆ ಮಾಡಿದ್ದೇವೆ. ಬರಪೀಡಿತ ಎಂದು ಮಾಡಿದ ಮೇಲೆ ನಾವು ಅಲ್ಲಿಗೆ ಏನೇನು ಕೊಡಬೇಕು, ತುರ್ತಾಗಿ ಕುಡಿಯುವ ನೀರು ಪೂರೈಕೆ, ಜಾನುವಾರುಗಳಿಗೆ ಮೇವು ಪೂರೈಕೆ, ಬರದಿಂದ ಬೆಳೆ ಹಾನಿಯಾಗತಕ್ಕಂಥ ರೈತರಿಗೆ input subsidy, ರಾಷ್ಟ್ರೀಯ ಉದ್ಯೋಗ ಖಾತರಿಯಲ್ಲಿ ಉದ್ಯೋಗ, ವಿಪತ್ತು ನಿರ್ವಹಣೆಯಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆ, ಕೃಷಿ ಇಲಾಖೆ, ಇವೆಲ್ಲವೂ ಕೂಡ ಅನುಷ್ಠಾನಗೊಳಿಸಿ, ಇದಕ್ಕೆ ಕುಡಿಯುವ ನೀರಿನ ಸಮಸ್ಯೆ ಸದ್ಯಕ್ಕೆ ಯಾವುದೂ ಕೂಡ ಇಲ್ಲ. ಇಲ್ಲಿ ತಮಗೆ ಹೇಳತಕ್ಕದ್ದು ಎಂದರೆ, ಉತ್ತರ ಕರ್ನಾಟಕದ ಭಾಗಗಳಲ್ಲಿ ಬೇಸಿಗೆ ಋತುವಿನಲ್ಲಿ ಮಾತ್ರ ಉದ್ಯೋಗ ಅರಸಿ ಜನರು ಗುಳೆ ಹೋಗುತ್ತಾರೆ. ಇದು ಸಾಮಾನ್ಯ ಸಂಗತಿ. ಮುಂಗಾರು ಆರಂಭವಾದ ತಕ್ಷಣ ಕೃಷಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದಕ್ಕೆ

ವಾಪಸ್ ಬರುತ್ತಾರೆ. ಸದ್ಯಕ್ಕೆ ಮುಂಗಾರು ಮಳೆ ಪ್ರಾರಂಭವಾಗುವುದರಿಂದ ಜುಲೈ ಅಂತ್ಯದವರೆಗೂ ಕಾಯುತ್ತಿದ್ದಾರೆ. ಹಾಗಾಗಿ, ಸದ್ಯಕ್ಕೆ ಗುಳೆ ಹೋಗಿರತಕ್ಕಂಥ ಪ್ರಕರಣ ಯಾವುದೂ ಇಲ್ಲ.

ಡಾ॥ ಎ.ಬಿ. ಮಾಲಕರೆಡ್ಡಿ: ಏನೋ ಒಂದು ಹೇಳಿಕೆ ಕೊಡಬೇಕೆಂದು ಅಧಿಕಾರಿಗಳು ಕೊಟ್ಟಿದ್ದಾರೆ. ಮಾನ್ಯ ಸಚಿವರು ಹೇಳಿದ್ದಾರೆ. ಅವರ ಬಗ್ಗೆ ನನಗೆ ಗೌರವವಿದೆ. ದಿನನಿತ್ಯ 300–400 ಜನರು ಗುಳೆ ಹೋಗುತ್ತಿದ್ದಾರೆ.

ಅಧ್ಯಕ್ಷರು: ಏನು ಮಾಡಬೇಕು ಹೇಳಿ?

ಡಾ॥ ಎ.ಬಿ. ಮಾಲಕರೆಡ್ಡಿ: ಯಾದಗಿರಿ railway station ನಲ್ಲಿ ಇರುತ್ತಾರೆ. ಆಮೇಲೆ, ಸರ್ಕಾರಕ್ಕೆ ಮಹಾತ್ಮಾಗಾಂಧಿ ಉದ್ಯೋಗ ಖಾತರಿ ಯೋಜನೆ ಬಹಳ handy ಆಗಿದೆ. ಈ ಕಾರ್ಯಕ್ರಮದಲ್ಲಿ ಉದ್ಯೋಗವನ್ನು ಸೃಷ್ಟಿ ಮಾಡಲಾಗಿದೆ ಎನ್ನುತ್ತಾರೆ. ಏನೂ ಸೃಷ್ಟಿ ಇಲ್ಲ. Last year ನದ್ದು, ಉದ್ಯೋಗ ಖಾತರಿ ಯೋಜನೆಯಲ್ಲಿ expenditure ಕೊಡಿ ಎಂದು ಹೇಳಿ ನೋಡೋಣ. ಈ ಸಲ ಗ್ರಾಮ ಪಂಚಾಯತಿ ಚುನಾವಣೆ ನಡೆದಿವೆ, ಮೊನ್ನೆ ಮೊನ್ನೆ ಗ್ರಾಮ ಪಂಚಾಯಿತಿ constitute ಆಗಿವೆ, ಪ್ರಸ್ತಾವನೆ ಯಾವಾಗ ತಯಾರು ಮಾಡಿದರು? ಕಾಮಗಾರಿಗಳನ್ನು ಯಾವಾಗ ತೆಗೆದುಕೊಂಡರು? 21,000 ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ಹೇಳುತ್ತಾರೆ.

ಅಧ್ಯಕ್ಷರು: ಮಾಲಕರೆಡ್ಡಿಯವರೆ, ನೀವು ಹೇಳುವುದರಲ್ಲಿ ಸತ್ಯ ಇದೆ. ಮೊನ್ನೆ ನೀವು ಈ ವಿಷಯಗಳ ಬಗ್ಗೆ ಚರ್ಚೆಯ ಕಾಲದಲ್ಲಿ ಮಾತನಾಡಬೇಕಾಗಿತ್ತು. ಮಾಡಲಿಲ್ಲ. ಆದರೂ ನಾನು ಅವರಿಗೆ ಹೇಳಿದ್ದೇನೆ. ಕಾನೂನು ಪ್ರಕಾರ ವಾರಕ್ಕೊಂದು ಸಾರಿ ಸಂಬಳ ಕೊಡಬೇಕು ಎಂದಿದೆ. ಆ ಪ್ರಕಾರ ಆ ಕೆಲಸ ಪ್ರಾರಂಭ ಮಾಡಿದರೆ ಯಾರೂ ಗುಳೆ ಹೋಗುವುದಿಲ್ಲ. ಇದಕ್ಕೇನಾಗಿದೆ ಎಂದರೆ, ಅವರು ಹೇಳುವ ರೀತಿಯಲ್ಲೇ ಹೇಳುವುದು ಆಗುತ್ತಿದೆ. ಆ ಕಾನೂನಿನಲ್ಲಿದೆಯೋ, ಇಲ್ಲವೋ?

ಡಾ॥ ಎ.ಬಿ. ಮಾಲಕರೆಡ್ಡಿ: ಅಭಾವ ಪರಿಸ್ಥಿತಿಗಳಲ್ಲಿ.

ಅಧ್ಯಕ್ಷರು: ಅವೆಲ್ಲ ಗೊತ್ತಿದೆ.

ಡಾ॥ ಎ.ಬಿ. ಮಾಲಕರೆಡ್ಡಿ: ಜನರಿಗೆ ಕನಿಷ್ಠ, ಇವತ್ತು ದುಡಿಯುತ್ತಾನೆ, ಅವತ್ತೇ ತಮ್ಮ ಕೈಗೆ ಹಣ ಬೇಕೆನ್ನುತ್ತಾರೆ. ಇವರು ಒಂದು ವಾರ, ಎರಡು ವಾರ, ತಿಂಗಳು ತಿಂಗಳಾದರೂ ಹಣ ಕೊಡದಿದ್ದರೆ ಅವರು ಉದ್ಯೋಗ ಖಾತರಿ ಯೋಜನೆಯಲ್ಲಿ ಹೇಗೆ ಕೆಲಸ ಮಾಡುವುದಕ್ಕೆ ಅಲ್ಲಿ ಹೋಗುತ್ತಾರೆ? ಯಾರೂ ಕೆಲಸ ಮಾಡಲಿಕ್ಕೆ, ಹೋಗಲಿಕ್ಕೆ ತಯಾರೇ ಇಲ್ಲ.

ಅಧ್ಯಕ್ಷರು: ಈ ಕಾನೂನು ತಂದಿದ್ದ ಬಗ್ಗೆ ನೋಡಿ ಇದನ್ನು.

ಡಾ॥ ಎ.ಬಿ. ಮಾಲಕರೆಡ್ಡಿ: ಅದು ಯಶಸ್ವಿಯಾಗುತ್ತಿಲ್ಲ. ಅದಕ್ಕೆ ಅಭಾವ ಇದ್ದಾಗ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು. DC ಯವರಿಗೆ ಸೂಚನೆ ಕೊಡಿ.

ಅಧ್ಯಕ್ಷರು: ಕಂದಾಯ ಸಚಿವರೆ, ಗುಳೆ ಹೋಗುವುದನ್ನು ತಪ್ಪಿಸುವ ದೃಷ್ಟಿಯಿಂದ ಉದ್ಯೋಗ ಖಾತರಿ ಯೋಜನೆಯನ್ನು ಪರಿಣಾಮಕಾರಿಯಾಗಿ ನಾವು ಜಾರಿಗೊಳಿಸುತ್ತೇವೆ ಎನ್ನುವ ಭರವಸೆ ಮಾತನ್ನು ಹೇಳಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ನಾನು ತಮ್ಮ ಮುಖಾಂತರ ಅವರಿಗೆ ಹೇಳಿದ್ದು ಏನೆಂದರೆ, ಗುಳೆ ಹೋಗುವುದನ್ನು ತಡೆಯಲು ಇದುವರೆಗೆ ಏನು ಮಾಡಿದ್ದೇವೆ ಎನ್ನುವುದನ್ನು ಅವರ ಗಮನಕ್ಕೆ ತಂದಿದ್ದೇನೆ. ಮುಂದೇನು ಮಾಡಬೇಕು ಎನ್ನುವ ಬಗ್ಗೆ ಅವರು ಸಲಹೆ ಕೊಟ್ಟರೆ ಖಂಡಿತವಾಗಿ ಮಾಡೋಣ.